ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ
ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ
**ಜೆಎಸ್‌ಎಸ್ ಮಹಾವಿದ್ಯಾಪೀಠ**
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004

## ಪ್ರಕಟಣೆಗಾಗಿ

# ಸ್ವ ಅರಿವಿನಿಂದ ಮುಕ್ತಿ ಸಾಧ್ಯ

– ಶ್ರೀ ನಿಜಗುಣ ದೇವರು

ಸ್ವ ಅರಿವಿನಿಂದ ಮುಕ್ತಿ ಸಾಧ್ಯ ಎಂದು ಬೆಳಗಾವಿ ಜಿಲ್ಲೆಯ ಪಿ.ಜಿ. ಹುಣಸ್ಯಾಳ ಕೈವಲ್ಯಾಶ್ರಮದ ಶ್ರೀ ನಿಜಗುಣ ದೇವರು ಶ್ರೀ ಸುತ್ತೂರು ಕ್ಷೇತ್ರದಲ್ಲಿ ಮೇ 20 ರಂದು ಅಧ್ಯಯನ ಶಿಬಿರದಲ್ಲಿ 'ವಸ್ತು-ಶಕ್ತಿ-ದ್ವಿತಯಂ' ವಿಷಯ ಕುರಿತು ಉಪನ್ಯಾಸ ನೀಡುತ್ತಾ ತಿಳಿಸಿದರು. ವ್ಯಕ್ತಿಯು ಜೀವನದಲ್ಲಿ ಎಷ್ಟೇ ಜ್ಞಾನ ಸಂಪಾದಿಸಿದರೂ ಆತ್ಮದ ಅರಿವಿಲ್ಲದಿದ್ದರೆ ಪ್ರಯೋಜನವಿಲ್ಲ. ಮೊದಲು ತನ್ನನ್ನು ತಾನು ಅರಿತು ಮುಕ್ತಿಯೆಡೆಗೆ ಸಾಗಬೇಕು. ಜೀವನವು ಭವ-ಬಂಧನಗಳಿಂದ ಬಂಧಿತವಾಗಿದ್ದು, ಅದರಿಂದ ಹೊರಬರಬೇಕಾದರೆ ಗುರುವಿನ ಕೃಪೆ ಮುಖ್ಯ. ಗುರು ಮತ್ತು ಗುರಿಯನ್ನು ತೊರೆಯಬಾರದು. ಗುರುವಿನ ಕಾರುಣ್ಯದಿಂದ ಆತ್ಮಜ್ಞಾನ ಸಂಪಾದಿಸಬೇಕು. 'ನನ್ನದು' ಎನ್ನುವುದು ದೇಹ ಹಾಗೂ ಮನಸ್ಸುಗಳಾದರೆ, 'ನಾನು' ಎನ್ನುವುದು ಆತ್ಮ, ಇದು ನಿರ್ಗುಣ ಮತ್ತು ನಿರಾಕಾರ. ಶರೀರಕ್ಕೆ ಸ್ವತಃ ಚೈತನ್ಯ ಶಕ್ತಿ ಇಲ್ಲ. ಶರೀರ, ಮನಸ್ಸು, ಬುದ್ಧಿಗಳು ಆತ್ಮದಿಂದಲೇ ಚೈತನ್ಯ ಪಡೆದು ಕಾರ್ಯನಿರ್ವಹಿಸುತ್ತವೆ. ಪರಮಾತ್ಮ ಎಂಬುದು ಅನಂತವಾದ ಆಕಾಶ, ಆತ್ಮ-ಪರಮಾತ್ಮ ಒಂದೆ ಎಂದು ತಿಳಿಸಿದರು.

ಮೈಸೂರಿನ ಶ್ರೀ ಸದಾಶಿವ ಗುರೂಜಿಯವರು 'ಭೂತ ಪಂಚೀಕರಣ' ಕುರಿತು ಉಪನ್ಯಾಸ ನೀಡುತ್ತಾ, ಜಗತ್ತು ಭೂಮಿ, ಅಗ್ನಿ, ಜಲ, ವಾಯು, ಆಕಾಶಗಳೆಂಬ ಪಂಚಭೂತಗಳ ಮಿಶ್ರಣವಾಗಿದೆ. ಪಂಚಭೂತಗಳಲ್ಲಿ ಅತ್ಯಂತ ಸೂಕ್ಷ್ಮವಾದುದು ಆಕಾಶ ತತ್ವ. ಆಕಾಶದ ಒಂದಂಶವು ವಾಯುವನ್ನು ಸೇರಿದರೆ ಮನಸ್ಸು, ಅಗ್ನಿಯನ್ನು ಸೇರಿದರೆ ಬುದ್ಧಿ, ಜಲತತ್ವವನ್ನು ಸೇರಿದರೆ ಚಿತ್ತ, ಪೃಥ್ವಿ ಸೇರಿದರೆ ಅಹಂಕಾರ ಹುಟ್ಟುತ್ತದೆ ಎಂದು ವಚನಕಾರರು ವಿವರಿಸಿದ್ದಾರೆ. ಇದನ್ನರಿತು ನಾವು ಶರಣರ, ಸಂತರ ಸಹವಾಸದಿಂದ ಜೀವನವನ್ನು ಸರಳಗೊಳಿಸಿಕೊಳ್ಳಬೇಕು. ವೇದಾಂತವನ್ನು ಚಿಂತಿಸಿ, ಅಳವಡಿಸಿಕೊಳ್ಳಬೇಕು. ವೇದಾಂತವೇ ದೇವರು ಎಂದು ತಿಳಿಸಿದರು.

ಶಿಬಿರದಲ್ಲಿ ಕರ್ನಾಟಕ, ಕೇರಳ ಹಾಗೂ ಮಹಾರಾಷ್ಟ್ರದಿಂದ ಆಗಮಿಸಿರುವ 120 ಕ್ಕೂ ಹೆಚ್ಚು ಶಿಬಿರಾರ್ಥಿಗಳು ಪಾಲ್ಗೊಂಡಿದ್ದಾರೆ.



ಶ್ರೀ ಸುತ್ತೂರು ಕ್ಷೇತ್ರದಲ್ಲಿ ನಡೆಯುತ್ತಿರುವ ಅಧ್ಯಯನ ಶಿಬಿರದಲ್ಲಿ ಶ್ರೀ ನಿಜಗುಣ ಶಿವಯೋಗಿಗಳ ‘ಪರಮಾರ್ಥಗೀತೆ’ ಕೃತಿಯ ಕುರಿತು ಬೆಳಗಾವಿ ಜಿಲ್ಲೆಯ ಪಿ.ಜಿ. ಹುಣಸ್ಯಾಳ ಕೈವಲ್ಯಾಶ್ರಮದ ಶ್ರೀ ನಿಜಗುಣ ದೇವರು ಉಪನ್ಯಾಸ ನೀಡುತ್ತಿರುವುದು.